# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

## ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ.

ಕವಿಪ್ರನಿನಿ/ಬಿ. B93/ 35989/ 2016-17 C45-11

ನಿಗಮ ಕಾರ್ಯಾಲಯ, ಕಾವೇರಿ ಭವನ,
ಬೆಂಗಳೂರು. ದಿನಾಂಕ: 07-11-2016

೧. ವ್ಯವಸ್ಥಾಪಕ ನಿರ್ದೇಶಕರು,
ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳು.
೨. ಎಲ್ಲಾ ಆರ್ಥಿಕ ಸಲಹೆಗಾರರು,
ಕವಿಪ್ರನಿನಿ ಮತ್ತು ಎಲ್ಲಾ ವಿಸಕಂಗಳು,

ಮಾನ್ಯರೆ,

ವಿಷಯ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯಡಿ ಕವಿಪ್ರನಿನಿ / ವಿಸಕಂಗಳ ನೌಕರರ ಪಿಂಚಣಿ ವಂತಿಕೆಯ ವಿವರಗಳನ್ನು ಒದಗಿಸುವಂತೆ ಕೋರಿ ಸಲ್ಲಿಸುತ್ತಿರುವ ಮನವಿ ಪತ್ರಗಳ ಬಗ್ಗೆ.

ಉಲ್ಲೇಖ೧. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 4/ಪಿಇಟಿ 2005 ದಿನಾಂಕ 31-03-2003
೨. ನಿಗಮದ ಆದೇಶ ಸಂಖ್ಯೆ ಕವಿಪ್ರನಿನಿ/ಬಿ.93/35978/2014-15 ದಿನಾಂಕ 04-05-2015

*****

ಕವಿಪ್ರನಿನಿ / ವಿಸಕಂಗಳಲ್ಲಿ ದಿನಾಂಕ 01-04-2006 ರಂದು ಮತ್ತು ನಂತರ ಸೇವೆಗೆ ಸೇರುವ ಅಧಿಕಾರಿ / ನೌಕರರಿಗೆ ಅನ್ವಯವಾಗುವಂತೆ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯನ್ನು ಜಾರಿಗೆ ತರಲಾಗಿರುತ್ತದೆ. ಸದರಿ ಯೋಜನೆಯಲ್ಲಿ ನೌಕರರಿಂದ ಮೂಲ ವೇತನ ಮತ್ತು ತುಟ್ಟಿಭತ್ಯೆಯ ಒಟ್ಟು ಮೊತ್ತದ ಶೇಕಡ ೧೦ ರಷ್ಟು ಪಿಂಚಣಿ ವಂತಿಗೆಯನ್ನು ವಸೂಲಿ ಮಾಡಲಾಗುತ್ತಿದ್ದು ಸಮಾನ ಮೊತ್ತದ ಪಿಂಚಣಿ ವಂತಿಗೆಯನ್ನು ಉದ್ಯೋಗದಾತರು ಕವಿಪ್ರನಿನಿ ಮತ್ತು ವಿಸಕಂಗಳ ನೂತನ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕಕ್ಕೆ (ಕೆಇಎನ್‌ಡಿಸಿಪಿಎಸ್ ಘಟಕ )ಸಂದಾಯ ಮಾಡುತ್ತಿರುತ್ತಾರೆ. ಈ ರೀತಿ ಸ್ವೀಕರಿಸಲಾದ ಮೊತ್ತವನ್ನು ಹೆಚ್ಚು ಬಡ್ಡಿ ನೀಡುವ ಬ್ಯಾಂಕ್ ಗಳಲ್ಲಿ ನಿಶ್ಚಿತ ಠೇವಣಿಗಳಲ್ಲಿ ಹೂಡಿಕೆ ಮಾಡಲಾಗುತ್ತಿತ್ತು. ಮುಂದುವರೆದಂತೆ, ಕೆಇಎನ್‌ಡಿಸಿಪಿಎಸ್ ಘಟಕದಲ್ಲಿ ಪಿಂಚಣಿ ವಂತಿಗೆಯ ನೌಕರವಾರು ವಿವರಗಳನ್ನು ಪ್ರತ್ಯೇಕ ತಂತ್ರಾಂಶದಲ್ಲಿ ದಾಖಲಿಸಿ ಲೆಕ್ಕ ನಿರ್ವಹಣೆ ಮಾಡಲಾಗುತ್ತಿದೆ.

ದಿನಾಂಕ 04-05-2015 ರ ನಿಗಮದ ಆದೇಶದ ಅನುಸಾರ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ಸಂಪೂರ್ಣ ನಿರ್ವಹಣೆಯನ್ನು LIC-P&GS Unit ಸಂಸ್ಥೆಗೆ ವಹಿಸಲಾಗಿದ್ದು, ಸದರಿ ಯೋಜನೆ ವ್ಯಾಪ್ತಿಯ ಅಧಿಕಾರಿ / ನೌಕರರ ತಿಂಗಳವಾರು / ನೌಕರವಾರು ವಿವರಗಳನ್ನು ಈ ಯೋಜನೆ ಪ್ರಾರಂಭವಾದ ದಿನಾಂಕವಾದ 01-04-2006 ರಿಂದ ಪ್ರಾರಂಭಿಸಿ ತಹಲ್ ವರೆಗೆ ಮತ್ತು ಮುಂದಿನ ಅವಧಿಗೂ ನಿರ್ವಹಣೆ ಮಾಡಬೇಕಿರುತ್ತದೆ. ಮುಂದುವರಿದಂತೆ, ನೌಕರರ ವಂತಿಗೆ / ಕಂಪನಿಗಳ ವಂತಿಗೆ ಮತ್ತು ಅವುಗಳ ಮೇಲೆ ಗಳಿಸಲಾದ ಬಡ್ಡಿ ಯ ವಿವರಗಳನ್ನು ಆನ್ ಲೈನ್ ಮೂಲಕ ವೀಕ್ಷಿಸಲು ಈ ಯೋಜನೆ ವ್ಯಾಪ್ತಿಯ ಅಧಿಕಾರಿ / ನೌಕರರಿಗೆ ಅನುವು ಮಾಡಿಕೊಡಲಾಗುವುದು.

EE(IT) 28/11/16

ಈ ಮೇಲಿನ ಕಾರ್ಯಕ್ಕೆ ಅವಶ್ಯವಿರುವ ತಿಂಗಳವಾರು / ನೌಕರವಾರು ಪಿಂಚಣಿ ವಂತಿಗೆ ವಿವರಗಳನ್ನು ಕೆಇಎನ್‌ಡಿಸಿಪಿಎಸ್ ಘಟಕವು LIC-P&GS Unit ಸಂಸ್ಥೆಗೆ ನೀಡಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ, ದಿನಾಂಕ 01-04-2006 ರಿಂದ 31-03-2015 ರ ವರೆಗೆ ತಿಂಗಳವಾರು / ನೌಕರವಾರು ಪಿಂಚಣಿ ವಂತಿಗೆ ವಿವರಗಳನ್ನು ಈಗಾಗಲೇ LIC-P&GS Unit ಸಂಸ್ಥೆಗೆ ನೀಡಲಾಗಿದ್ದು, ದಿನಾಂಕ 01-04-2015 ರಿಂದ 31-05-2016 ರ ವರೆಗಿನ ಪಿಂಚಣಿ ವಂತಿಗೆ ವಿವರಗಳನ್ನು ಕೆಇಎನ್‌ಡಿಸಿಪಿಎಸ್ ಘಟಕದಲ್ಲಿ ತಂತ್ರಾಂಶದಲ್ಲಿ ದಾಖಲಿಸಲಾಗುತ್ತಿದ್ದು ಡಿಸೆಂಬರ್ 2016 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ. ಜೂನ್ 2016 ರ ತಿಂಗಳಿಂದ ಪ್ರಾರಂಭಿಸಿ ಮುಂದಿನ ಅವಧಿಗೆ ಲೆಕ್ಕ ಘಟಕಗಳೇ ಪಿಂಚಣಿ ವಂತಿಗೆ ವಿವರಗಳನ್ನು ಪ್ರತಿ ತಿಂಗಳೂ ಅಂತರ್ಜಾಲ ಆಧಾರಿತ ಹೊಸ ತಂತ್ರಾಂಶದಲ್ಲಿ ದಾಖಲಿಸಬೇಕಾಗಿದ್ದು ಅವರಿಗೆ ಸುಲಭಗೊಳಿಸುವ ಉದ್ದೇಶದಿಂದ ಜೂನ್ 2016 ರ ತಿಂಗಳ ಪಿಂಚಣಿ ವಂತಿಗೆ ವಿವರಗಳನ್ನು ಕೆಇಎನ್‌ಡಿಸಿಪಿಎಸ್ ಘಟಕದಲ್ಲಿಯೇ ತಂತ್ರಾಂಶದಲ್ಲಿ ದಾಖಲಿಸಲಾಗಿದೆ. ಲೆಕ್ಕ ಘಟಕಗಳು ಅಂತರ್ಜಾಲ ಆಧಾರಿತ ಹೊಸ ತಂತ್ರಾಂಶದಲ್ಲಿ ಪಿಂಚಣಿ ವಂತಿಗೆ ವಿವರಗಳನ್ನು ದಾಖಲಿಸುವ ಬಗ್ಗೆ ಆಯಾ ಕಂಪನಿಗಳಲ್ಲಿ ಕಾರ್ಯಾಗಾರಗಳನ್ನು ನಡೆಸಿ ತರಬೇತಿ ನೀಡಲಾಗುತ್ತಿದೆ.

ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ವ್ಯಾಪ್ತಿಯ ಕೆಲವು ಅಧಿಕಾರಿ / ನೌಕರರು ಕೆಇಎನ್‌ಡಿಸಿಪಿಎಸ್ ಘಟಕಕ್ಕೆ ನೇರವಾಗಿ / ಸಮುಚಿತ ಮಾರ್ಗದಲ್ಲಿ / ಮಾಹಿತಿ ಹಕ್ಕು ಕಾಯಿದೆಯಡಿ ಅರ್ಜಿ ಸಲ್ಲಿಸಿ ಅವರ ವಂತಿಗೆಯ ವಿವರ, ಗಳಿಸಿಲಾದ ಬಡ್ಡಿಯ ವಿವರಗಳನ್ನು ಒದಗಿಸುವಂತೆ ಕೋರುತ್ತಿರುತ್ತಾರೆ. ಮೇಲೆ ತಿಳಿಸಿರುವ ಹಿನ್ನಲೆಯಲ್ಲಿ ಅವರ ಕೋರಿಕೆಯಂತೆ, ಕೆಇಎನ್‌ಡಿಸಿಪಿಎಸ್ ಘಟಕದಿಂದ ಹಾಲಿ ಪರಿಸ್ಥಿತಿಯಲ್ಲಿ ನೀಡಬಹುದಾದ ಮಾಹಿತಿಯು ಅಪೂರ್ಣವಾಗುವ ಸಾಧ್ಯತೆಗಳಿದ್ದು ಅದು ಸಮಂಜಸವೆನಿಸುವುದಿಲ್ಲ.

**ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯ ತಿಂಗಳವಾರು / ನೌಕರವಾರು ಪಿಂಚಣಿ ವಂತಿಗೆಯ ವಿವರಗಳನ್ನು ಎಲ್ಲಾ ವಿಧಗಳಿಂದಲೂ ಪೂರ್ಣಗೊಳಿಸುವ ಕಾರ್ಯ ಸದ್ಯದಲ್ಲಿಯೇ ಸಂಪೂರ್ಣಗೊಳ್ಳಲಿದ್ದು ತದನಂತರ ಅಧಿಕಾರಿ / ನೌಕರರು ಪಿಂಚಣಿ ವಂತಿಗೆ / ಬಡ್ಡಿ ಗಳಿಕೆ ವಿವರಗಳನ್ನು ಆನ್ ಲೈನ್ ಮೂಲಕ ವೀಕ್ಷಿಸುವುದಕ್ಕೆ ಅನುವು ಮಾಡಿಕೊಡಲಾಗುವುದು. ಅಲ್ಲಿಯವರೆಗೆ, ಮೇಲೆ ತಿಳಿಸಿದಂತೆ ಈ ಕಛೇರಿಗೆ ಬರುವ ಸಂಬಂಧಿಸಿದ ಅರ್ಜಿ / ಮನವಿ/ ಪತ್ರಗಳಿಗೆ ಪ್ರತ್ಯೇಕವಾಗಿ ಉತ್ತರಿಸುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ. ಅಲ್ಲಿಯವರೆಗೂ ಸಮಾಧಾನ ಚಿತ್ತದಿಂದ ಇರುವಂತೆ ಅಧಿಕಾರಿ / ನೌಕರರಿಗೆ ಕೋರುತ್ತಾ ಸದರಿ ಪತ್ರವನ್ನು ನಿಮ್ಮ ಕಂಪನಿ ವ್ಯಾಪ್ತಿಯ ಎಲ್ಲಾ ಲೆಕ್ಕ ಘಟಕಗಳ ಕಛೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸುವುದರ ಮೂಲಕ ಮೇಲಿನ ವಿಷಯಗಳನ್ನು ಅವರ ಗಮನಕ್ಕೆ ತರುವಂತೆ ಕೋರಲಾಗಿದೆ.**

ತಮ್ಮ ವಿಶ್ವಾಸಿ

ನಿರ್ದೇಶಕರು
(ಆ ಮತ್ತು ಮಾ.ಸಂ)

ಪ್ರತಿಗಳು:

೧. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

೨. ವ್ಯವಸ್ಥಾಪಕ ನಿರ್ದೇಶಕರು, ಪಿ.ಸಿ.ಕೆ.ಎಲ್ ರವರ ಆಪ್ತ ಕಾರ್ಯದರ್ಶಿ ರವರಿಗೆ. ವ್ಯವಸ್ಥಾಪಕ ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

೩. ನಿರ್ದೇಶಕರು (ಹಣಕಾಸು), ರವರ ಆಪ್ತ ಕಾರ್ಯದರ್ಶಿ ರವರಿಗೆ. ನಿರ್ದೇಶಕರ ಗಮನಕ್ಕೆ ತರುವಂತೆ ಕೋರಲಾಗಿದೆ.

**ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ** www.kptcl.com/eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

೧. ಎಲ್ಲಾ ಮುಖ್ಯ ಇಂಜಿನಿಯರ್ ಕವಿಪ್ರನಿನಿ / ಎಸ್ಕಾಂಗಳು
೨. ಎಲ್ಲಾ ಅಧೀಕ್ಷಕ ಇಂಜಿನಿಯರ್ / ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
೩. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್ / ಉಪ ನಿಯಂತ್ರಣಾಧಿಕಾರಿ ಕವಿಪ್ರನಿನಿ / ಎಸ್ಕಾಂಗಳು
೪. ಎಲ್ಲಾ ಲೆಕ್ಕಾಧಿಕಾರಿಗಳು ಕವಿಪ್ರನಿನಿ / ಎಸ್ಕಾಂಗಳು
೫. ಎಲ್ಲಾ ಲೆಕ್ಕಾಧಿಕಾರಿಗಳು (ಆಂತರಿಕ ತನಿಖೆ) ಕವಿಪ್ರನಿನಿ / ಎಸ್ಕಾಂಗಳು